ಕರ್ನಾಟಕ ವಿಧಾನಸಭೆ

ಸೋಮವಾರ 12ನೇ ಮಾರ್ಚ್ 2001 ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-00 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ.ವಿ.ವೆಂಕಟಪ್ಪ ರವರು) ಪೀಠವನ್ನು ಅಲಂಕರಿಸಿದ್ದರು.

ಶ್ರೀ ಜಗದೀಶ್ ಶೆಟ್ಟರ್ (ಸನ್ಮಾನ್ಯ ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ವಿದ್ಯುತ್ ದರ ಹೆಚ್ಚಳದ ಬಗ್ಗೆ ನಾನು ಬಹಳ ಮಹತ್ವದ ವಿಚಾರವನ್ನು ಪ್ರಸ್ತಾಪಿಸಬಯಸುತ್ತೇನೆ. ಅದಕ್ಕಾಗಿ ನಾನು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿದ್ದೇನೆ. ದಯವಿಟ್ಟು ತಾವು ನನಗೆ ಮಾತನಾಡಲು ಅವಕಾಶ ಕೊಡಬೇಕಾಗಿ ಕೋರುತ್ತೇನೆ.

ಅಧ್ಯಕ್ಷರು : ಒಂದು ಸಂತಾಪ ಸೂಚಕ ನಿರ್ಣಯವಿದೆ. ಅದನ್ನು ಮೊದಲು ತೆಗೆದುಕೊಳ್ಳೋಣ.

1. ಸಂತಾಪ ಸೂಚಕ ನಿರ್ಣಯ

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಸಿ. ಮುನಿಸ್ವಾಮಯ್ಯ ಅವರು ವೃತ್ತಿಯಲ್ಲಿ ಕೃಷಿಕರಾಗಿದ್ದು, ಸಮಾಜ ಸೇವಕರಾಗಿದ್ದರು. ಮುಳಬಾಗಿಲು ನಗರಸಭೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದು ಶ್ರೀಯುತರು 1941ರವರೆಗೆ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನಿಂದ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು 11-03-2001ರಂದು ನಿಧನ ಹೊಂದಿದರು. ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಸನ್ಮಾನ್ಯ ಸಭಾ ಸದಸ್ಯರುಗಳು ಒಂದು ನಿಮಿಷ ಕಾಲ ಎದ್ದು ನಿಂತು ಮೌನವನ್ನಾಚರಿಸಿ ಗೌರವ ಸೂಚಿಸಿದರು)

ಅಧ್ಯಕ್ಷರು : ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಮಾನ್ಯ ವಿರೋಧಪಕ್ಷದ ನಾಯಕರು ಈಗಾಗಲೇ ಸಭೆಯ ಗಮನಕ್ಕೆ ತಂದ ವಿಚಾರವು ಅರ್ಜೆಂಟ್ ಇಲ್ಲವೆಂದು ನಾನು ಹೇಳುವುದಿಲ್ಲ. ಅದೂ ಕೂಡ ತುಂಬಾ ಜರೂರು ವಿಚಾರವೇ ಆಗಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಒಂದು ಪ್ರಮುಖ ವಿಚಾರವನ್ನು ಸಭೆಯ ಗಮನಕ್ಕೆ ತರುವುದೇನೆಂದರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯು ವಿಚಾರದಲ್ಲಿ ನಾವು ಇದುವರೆಗೂ ವಿಳಂಬ ಮಾಡಿದ್ದು ಬಹಳ.... ಆ ಬಗ್ಗೆ ನಮ್ಮ ರೂಲ್ಸ್ ಆಫ್ ಪ್ರೊಸೀಜರ್ ಆಗಲೀ, ಕಾಲ್ ಅಂಡ್ ಶಕ್ ದರ್ ಪುಸ್ತಕದಲ್ಲಿ ಇರುವ ಪ್ರಕರಣವೇ ಆಗಲಿ, ಇಷ್ಟು ವಿಳಂಬ ಮಾಡಬಾರದಾಗಿತ್ತು. ಇವೊತ್ತು ನಾವು ಅದನ್ನು ಚರ್ಚೆಗೆ ತೆಗೆದುಕೊಳ್ಳಲೇಬೇಕು. ನಾವು ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡಿಯೋ ಇಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ವಿಚಾರ ಕೂಡ ಪ್ರಾಮುಖ್ಯವಾದುದು. ಆದುದರಿಂದ ಮೊದಲು ಪ್ರಶ್ನೋತ್ತರ ಅವಧಿ ಮುಗಿದ ಮೇಲೆ ಅರ್ಧ ಗಂಟೆಯ ಕಾಲಾವಕಾಶದಲ್ಲಿ ತಾವುಗಳು ಪ್ರಸ್ತಾಪ ಮಾಡಲು ನಾನು ಅವಕಾಶ ಮಾಡಿಕೊಡುತ್ತೇನೆ. ಅದಾದಮೇಲೆ ಕನ್‌ವರ್ಟ್ ಮಾಡಬೇಕೇ, ಬೇಡವೇ ಎಂಬುದನ್ನು ನೋಡಿಕೊಂಡು ಮುಂದೆ ನಿರ್ಧರಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ವಿದ್ಯುತ್ ದರ ಹೆಚ್ಚಳದ ವಿಚಾರವು ಬಹಳ ಮಹತ್ವದ ವಿಚಾರವಾಗಿದೆ. ಕರ್ನಾಟದ ಎಲ್ಲಾ ವರ್ಗದ ಜನರಿಗೆ ಇದರ ಪರಿಣಾಮವಾಗಿದೆ. ಅವರು ಬಡವರಿರಬಹುದು, ಮಧ್ಯಮ ವರ್ಗದವರಿರಬಹುದು, ರೈತರು ಇರಬಹುದು, ಇಂಡಸ್ಟ್ರೀಯಲಿಸ್ಟ್ ಇರಬಹುದು, ಎಲ್ಲರೂ ವಿದ್ಯುತ್ ದರ ಹೆಚ್ಚಳದಿಂದಾಗಿ ಪರಿತಪಿಸುತ್ತಾ ಇದ್ದಾರೆ. ಇದು ಬಹಳ ಮಹತ್ವವುಳ್ಳದ್ದು. ಅದಕ್ಕೆ ಕೇವಲ ಅರ್ಧ ಗಂಟೆ ಕಾಲ ವೇಳೆ ನಿಗದಿ ಮಾಡುವುದು ಸರಿಯಾಗುವುದಿಲ್ಲ. ಅದರ ಬಗ್ಗೆ ಸ್ವಲ್ಪ ವಿವರವಾದ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ನಾನು ಅರ್ಧ ಗಂಟೆ ಎಂದು ಹೇಳಿದರೆ ನೀವು ಒಂದು ಗಂಟೆ ತೆಗೆದುಕೊಳ್ಳುತ್ತೀರಿ. ಹಾಗಾಗಿ ಮೊದಲೇ ಅರ್ಧ ಗಂಟೆ ಎಂದು ಹೇಳಿದೆ..... ಕ್ವೆಶ್ಚನ್ ಅವರ್ ಮುಗಿದ ಮೇಲೆ ಅದನ್ನು ತೆಗೆಯಕೊಳ್ಳೋಣ.